ಸಾಕ್ಷಿಯನ್ನು ದಿಃ **27.11.2023** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಟಿ ಎಂ ಎಸ್ ವಕೀಲರಿಂದ:

ನಾನು ಯಾವುದೇ ವಿದ್ಯಾಭ್ಯಾಸ ಮಾಡಿರುವುದಿಲ್ಲ. ಯಾಚಘಟ್ಟ ಮತ್ತು ಲಕ್ಕೇಗೌಡನಪಾಳ್ಯದ ಮಧ್ಯದಲ್ಲಿ ಗಿರಿಗೌಡನಪಾಳ್ಯ ಇರುತ್ತದೆ ಎಂದರೆ ಸರಿ. ನಮ್ಮ ಊರು ಮತ್ತು ವಾದಿಯರ ಊರು ಸುಮಾರು 2 ಕಿಮೀ ಅಂತರದಲ್ಲಿರುತ್ತದೆ. ಲಕ್ಕಣ್ಣಗೌಡರ ಎಲ್ಲಾ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಲಕ್ಕಣ್ಣಗೌಡರಿಗೆ ಎಷ್ಟು ಜನ ಮಕ್ಕಳೆಂದು ನನಗೆ ಗೊತ್ತಿಲ್ಲ. ಚಿಕ್ಕಲಕ್ಕೇಗೌಡ ಎಂದರೆ ಯಾರೆಂದು ಗೊತ್ತಿಲ್ಲ. ಜವರೇಗೌಡ ಪರಿಚಯ ಇರುತ್ತದೆ. ಗೌಡಪ್ಪ ರವರ ಪರಿಚಯ ಇರುವುದಿಲ್ಲ. ಜವರೇಗೌಡರನ್ನು ನಾನು ಸಣ್ಣ ಹುಡುಗನಿದ್ದಾಗ ನೋಡಿದ್ದೆ. ಜವರೇಗೌಡರಿಗೆ ರಾಮು ಮತ್ತು ಕೃಷ್ಣಮೂರ್ತಿ ಎಂಬ ಇಬ್ಬರು ಮಕ್ಕಳು ಇರುತ್ತಾರೆ. ನಾನು ಲಕ್ಕಣ್ಣ, ಹುಚ್ಚಪ್ಪ, ಕಳಸಪ್ಪ, ಚಿಕ್ಕಣ್ಣ, ಎಲ್ ಲಕ್ಕಣ್ಣ ರವರ ಪೈಕಿ ಕಳಸಪ್ಪ ರವನ್ನು ಹೊರತುಪಡಿಸಿ ಬೇರೆಯವರನ್ನು ನೋಡಿರುವುದಿಲ್ಲ. ಅವರು ಯಾರ ಮಕ್ಕಳೆಂದು ಗೊತ್ತಿಲ್ಲ. ಅವರ ಮಕ್ಕಳ ಬಗ್ಗೆ ಸಹ ನನಗೆ ಗೊತ್ತಿಲ್ಲ. ಎಲ್ ಲಕ್ಕಣ್ಣ ರವರು ಜೀವಂತವಾಗಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ಹುಚ್ಚಪ್ಪ ಅಲಿಯಾಸ್ ಕೆಂಪಣ್ಣ, ಲಕ್ಕಪ್ಪ, ಚಿಕ್ಕಲಕ್ಕಪ್ಪ ಮತ್ತು ಗಂಗಲಕ್ಕಯ್ಯ, ನಂಜಮ್ಮ, ಮಹದೇವಮ್ಮ ಇವರುಗಳು ಯಾರು ಮತ್ತು ಯಾರ ಮಕ್ಕಳು ಎಂದು ಸಹ ನನಗೆ ಗೊತ್ತಿಲ್ಲ. ಗೌಡಯ್ಯನ ಹೆಂಡತಿ ಬಚ್ಚಮ್ಮ ಅಲಿಯಾಸ್ ತಿಬ್ಬಮ್ಮ ಯಾರೆಂದು ನನಗೆ ಗೊತ್ತಿಲ್ಲ. ಅವರ ಜೀವಿತ ಅವಧಿಯಲ್ಲಿ ಯಾವ ವ್ಯವಹಾರಗಳನ್ನು ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಲಕ್ಕಣ್ಣ, ಹುಚ್ಚಪ್ಪ, ಕಳಸಪ್ಪ, ಚಿಕ್ಕಣ್ಣ, ಎಲ್ ಲಕ್ಕಣ್ಣ ರವರ ನಡುವೆ ಮತ್ತು ಅವರ ಕುಟುಂಬದಲ್ಲಿ ಏನು ವ್ಯವಹಾರ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಗೌಡಯ್ಯ ಮತ್ತು ತಿಬ್ಬಮ್ಮ ಅಲಿಯಾಸ್ ಬಚ್ಚಮ್ಮ ರವರ ನಡುವೆ ಏನು ವ್ಯವಹಾರ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಿಃ 04.03.1980 ರಂದು ವಿಭಾಗ ಆಗಿದೆ ಎಂದು ಹೇಳುವ ವಿಬಾಗ ಯಾರ ನಡುವೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ.ಅದರ ಪತ್ರ ಸಹ ನಾನು ನೋಡಿಲ್ಲ

ಅದರಲ್ಲಿ ಬರೆದಿರುವ ಮಾಹಿತಿಗಳು ಗೊತ್ತಿಲ್ಲ. ಈ ದಿನ ನನ್ನನ್ನು ವಾದಿ ಕರೆದುಕೊಂಡು ಬಂದಿರುತ್ತಾರೆ. ನನ್ನ ಪ್ರಮಾಣಪತ್ರಕ್ಕೆ ವಾದಿ ಮಾಹಿತಿ ನೀಡಿರುತ್ತಾರೆ ಅದರಲ್ಲಿ ಬರೆದಿರುವ ಮಾಹಿತಿಗಳು ನನಗೆ ಗೊತ್ತಿಲ್ಲ. ಈ ದಾವೆ ಮೂರ್ತಿ, ಜಯಣ್ಣ, ರಾಘವ, ಪ್ರಬಾ ರವರ ನಡುವೆ ಇರುತ್ತದೆ ಎಂದು ಗೊತ್ತಾಗಿರುತ್ತದೆ. ಯಾವ ಆಸ್ತಿಗಳಿಗೆ ಈ ದಾವೆ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನಾನು ಸಾಕಮ್ಮ ರವರನ್ನು ನೋಡಿರುತ್ತೇನೆ. ಅವರು ಲಕ್ಕೇಗೌಡನಪಾಳ್ಯದವರಾಗಿರುತ್ತಾರೆ. ಅವರ ಗಂಡನನ್ನು ನಾನು ನೋಡಿರುವುದಿಲ್ಲ. ಅವರ ತಂದೆ ಹೆಸರು ಗೊತ್ತಿಲ್ಲ.ನಾನು ಮರಿಯಪ್ಪನ ಮಗ ರಾಮಣ್ಣನ ಮನೆ ನೋಡಿರುವುದಿಲ್ಲ. ಪ್ರಭಾಕರ್ ರವರ ಮನೆ ನೋಡಿರುತ್ತೇನೆ. ಪ್ರಭಾಕರ ಮನೆ ದಕ್ಷಿಣಕ್ಕೆ ರಸ್ತೆ ಇರುತ್ತದೆ. ರಸ್ತೆ ಯಾದ ನಂತರ ಪಾಳು ಮನೆ ಜಾಗ ಇರುತ್ತದೆ. ಪಾಳುಮನೆಯ ಪೂರ್ವಕ್ಕೆ ಸಾಕಮ್ಮನ ಜಾಗ ಇದೆ ಎಂದರೆ ಸರಿ. ಪಶ್ಚಿಮಕ್ಕೆ ಮರಿಯಪ್ಪನ ಪಾಲಿಗೆ ಬಂದ ಜಾಗ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

<u>*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*</u>

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.